ಆಡಳಿತ ಶಾಖೆ/ 15/2026

ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಕಾರ್ಯಾಲಯ,
ಬೆಂಗಳೂರು ದಕ್ಷಿಣ ಜಿಲ್ಲೆ,
ರಾಮನಗರ, ದಿನಾಂಕಃ 28.10.2026.

ಅರ್ಹತಾ -ಸ್ಪರ್ಧಾತ್ಮಕ ಪರೀಕ್ಷೆ

ವಿಷಯಃ ಬೆರಳಚ್ಚುಗಾರರ ಹುದ್ದೆಗೆ ಅರ್ಹತಾ-ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಬಗ್ಗೆ.

ಉಲ್ಲೇಖಃ ಈ ಕಛೇರಿಯ ನೇಮಕಾತಿ ಅಧಿಸೂಚನೆ ಸಂಖ್ಯೆಃ ಎ.ಡಿ.ಎಂ.15/2026, ದಿನಾಂಕಃ 24.07.2026.

* * * * *

ಬೆರಳಚ್ಚುಗಾರರ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆದರೆ, ಪಟ್ಟಿಯಲ್ಲಿ ಸೂಚಿಸಿರುವ ನಿಗದಿತ ದಿನಾಂಕದಂದು ಬೆಳಿಗ್ಗೆ-09.00 ಗಂಟೆಗೆ ಸರಿಯಾಗಿ, ನೀವು ಸಲ್ಲಿಸಿರುವ ಆನ್ ಲೈನ್ ಅರ್ಜಿಯ ಜೊತೆಗೆ ನೇಮಕಾತಿ ಅಧಿಸೂಚನೆಯಲ್ಲಿ ಕೇಳಿರುವ ಎಲ್ಲಾ ಮೂಲ ದಾಖಲೆಗಳು (ಶೈಕ್ಷಣಿಕ ವಿದ್ಯಾರ್ಹತೆ, ಮೀಸಲಾತಿ ಪ್ರಮಾಣ ಪತ್ರ-ಕ್ಲೇಮು ಮಾಡಿದಲ್ಲಿ, ಗುರುತು ಪತ್ರ- ಆಧಾರ್ ಕಾರ್ಡ್/ಚುನಾವಣಾ ಗುರುತು ಪತ್ರ/ ಚಾಲನಾ ಪರವಾನಿಗೆ ಪತ್ರ ಇತ್ಯಾದಿ) ಹಾಗೂ ಸದರಿ ಮೂಲ ದಾಖಲೆಗಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳು ಮತ್ತು ಪಾಸ್‌ಪೋರ್ಟ್ ಅಳತೆಯ ಒಂದು ಭಾವಚಿತ್ರದೊಂದಿಗೆ **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ** ಇಲ್ಲಿಗೆ ಮೂಲ ದಾಖಲೆಗಳ ಪರಿಶೀಲನೆ ಮತ್ತು ಅರ್ಹತಾ-ಸ್ಪರ್ಧಾತ್ಮಕ ಪರೀಕ್ಷೆಗೆ ನಿಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು ಹಾಗೂ ಮೂಲ ದಾಖಲೆಗಳ ಪರಶೀಲನೆಯ ಸಮಯದಲ್ಲಿ ಅಗತ್ಯ ಮೂಲ ದಾಖಲೆಗಳನ್ನು ಹಾಜರು ಪಡಿಸದೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

ಪರೀಕ್ಷಾ ವಿಧಾನ

15 ನಿಮಿಷಗಳ ಉಕ್ತಲೇಖನವನ್ನು ಬೆರಳಚ್ಚು ಪಡಿಸುವ ಅರ್ಹತಾ ಪರೀಕ್ಷೆಯನ್ನು ಕಂಪ್ಯೂಟರ್/ಗಣಕಯಂತ್ರದಲ್ಲಿ ನಡೆಸಲಾಗುವುದು ಹಾಗೂ ಸದರಿ ಪರೀಕ್ಷೆಗೆ ಸಂಬಂಧಿಸಿದ ಕನ್ನಡ ಕೀಲೀಮಣೆಯ ವಿನ್ಯಾಸವನ್ನು ಬೆಂಗಳೂರು ದಕ್ಷಿಣ ಜಿಲ್ಲಾ ನ್ಯಾಯಾಲಯ, ರಾಮನಗರ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

28/10/26

(ಮಂಜಪ್ಪ ಹನಮಂತಪ್ಪ ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಂಗಳೂರು ದಕ್ಷಿಣ ಜಿಲ್ಲೆ,
ರಾಮನಗರ.

Pr. District and Sessions Judge,
Ramanagara.

ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು ಈ ಕೆಳಕಂಡಂತೆ ಲಗತ್ತಿಸಲಾಗಿದೆ.